ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಜಮೀನನ್ನು ಒತ್ತುವರಿಯಾಗಿ ಅನುಭವಿಸಿ ಕೊಂಡು ಬರುತ್ತಿರುವ ಬಗ್ಗೆ

೧೩. ಶ್ರೀ ಬಿ. ರಮಾನಾಥ್ ರೈ (ಬಂಟ್ವಾಳ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ರೈತರು ಕೃಷಿ ಜಮೀನನ್ನು ಒತ್ತುವರಿಯಾಗಿ ಅನುಭವಿಸಿಕೊಂಡು ಬರುತ್ತಿರುವ ಕುರಿತು ಹಕ್ಕಿನ ಬಗ್ಗೆ ಸರ್ಕಾರದಲ್ಲಿ ಸ್ಪಷ್ಟ ಮಾಹಿತಿ ಇದೆಯೇ,

ಆ) ಈ ಕುರಿತು ಹಕ್ಕಿನ ಜಮೀನನ್ನು ಕಾನೂನು ಪ್ರಕಾರ ರೈತರ ಖಾತೆಗೆ ಸೇರಿಸಲು ಸರ್ಕಾರ ದವರು ಕ್ರಮ ಕೈಗೊಳ್ಳುವರೇ,

ಇ) ಕೆಲವು ರೈತರುಗಳು ಅವರ ಸ್ವಾಧೀನದಲ್ಲಿ ಹೆಚ್ಚಿನ ಸ್ಥಳವನ್ನು ಕುರಿತು ಯಾಗಿ ಉಪ ಯೋಗಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ,

ಈ) ಮಿತಿಗಿಂತ ಹೆಚ್ಚಿಗೆ ಇರುವ ಕುರಿತು ಸ್ಥಳವನ್ನು ಬಡರೈತರಿಗೆ ಹಂಚುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ) ಇದೆ

ಆ) ಪರಿಶೀಲಿಸಲಾಗುತ್ತದೆ.

ಇ) ಹೌದು

ಈ) ಪರಿಶೀಲಿಸಲಾಗುತ್ತಿದೆ.

ಡಕಾಯಿತಿ ಹಾವಳಿ ತಡೆಗಟ್ಟುವ ಕುರಿತು

೧೪—ಎ ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಡಕಾಯಿತರ ಹಾವಳಿ ತಡೆಗಟ್ಟಲು ಹೆಚ್ಚಿನ ಪೋಲೀಸ್ ಸಿಬ್ಬಂದಿ ಮತ್ತು ಆಧುನಿಕ ಸಲಕರಣೆಗಳ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಅ) ಹೌದು

ಆ) ರಾಜ್ಯದ ಸಿ. ಐ. ಡಿ. ಘಟಕಕ್ಕೆ ಈಗಾಗಲೇ ಎರಡು ಡಕಾಯಿತಿ ಪ್ರತಿಬಂಧಕ ದಳಗಳನ್ನು ಮಂಜೂರು ಮಾಡಿದ್ದು, ಅವು ಕಾರ್ಯನಿರತವಾಗಿವೆ. ಜೊತೆಗೆ ವಾಹನಗಳು, ವೈರಲೆಸ್ ಉಪಕರಣಗಳು ಹಾಗೂ ಇತರ ಸೌಲಭ್ಯಗಳನ್ನು ಸರ್ಕಾರದ ಮಂಜೂರಾತ್ವನ್ನದ ಪರಿಮಿತಿಗೆ ಒಳಪಟ್ಟು ಪೋಲೀಸ್ ಇಲಾಖೆಗೆ ಈ ಎಲ್ಲಾ ಸೌಲಭ್ಯಗಳನ್ನು ಒದಗಿಸುವ ಪ್ರಯತ್ನ ಮಾಡಲಾಗುತ್ತಿದೆ.

ರಾಜ್ಯದಲ್ಲಿ ಗನ್ ಲೈಸನ್ಸ್ ಕೋರಿ ಬಂದ ಅರ್ಜಿಗಳ ಬಗ್ಗೆ

೧೫ ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಡಕಾಯಿತರ ಹಾವಳಿ ತಡೆಗಟ್ಟಲು ಗನ್ ಲೈಸನ್ಸ್‌ಗಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು,

ಆ) ಆ ಪೈಕಿ ಎಷ್ಟು ಜನರಿಗೆ ಮಂಜೂರಾತಿ ನೀಡಲಾಗಿದೆ,

ಇ) ಉಳಿದವರಿಗೆ ಗನ್ ಲೈಸನ್ಸ್ ಮಂಜೂರಾತಿ ನೀಡದಿರಲು ಕಾರಣಗಳೇನು ?